# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1517 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24-09-2021. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ 5960.<br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>(ಆ)</td><td>ಸದರಿ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ಒಂದು ವರ್ಷಕ್ಕೆ ನೀಡುತ್ತಿರುವ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)</td><td>ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ವಾರ್ಷಿಕವಾಗಿ ಸಿಗುವ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸಂ</th><th>ಯೋಜನೆ / ಕಾರ್ಯಕ್ರಮ</th><th>ಅನುದಾನದ ಮೊತ್ತ</th></tr>
<tr><td>1</td><td>ಶಾಸನಬದ್ಧ ಅನುದಾನ</td><td>ರೂ.10-12 ಲಕ್ಷಗಳು.</td></tr>
<tr><td>2</td><td>15ನೇ ಹಣಕಾಸು ಆಯೋಗದ ಅನುದಾನ</td><td>ಜನ ಸಂಖ್ಯೆ ಮತ್ತು ಭೌಗೋಳಿಕ ಪ್ರದೇಶದ ಆಧಾರದ ಮೇಲೆ ರೂ. 20-30 ಲಕ್ಷಗಳು.</td></tr>
<tr><td>3</td><td>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ</td><td>ಪ್ರತಿ ಗ್ರಾಮ ಪಂಚಾಯಿತಿಯಲ್ಲಿನ ಕಾರ್ಮಿಕ ಆಯವ್ಯಯ ಆಧರಿಸಿ ಅನುದಾನ ನೀಡಲಾಗುತ್ತಿದೆ.</td></tr>
<tr><td>4</td><td>ಸ್ವಚ್ಛ ಭಾರತ್ ಮಿಷನ್</td><td>ಶೌಚಾಲಯ ನಿರ್ಮಿಸಿಕೊಳ್ಳಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗೆ ರೂ.15,000/- ಮತ್ತು ಸಾಮಾನ್ಯ ಫಲಾನುಭವಿಗೆ ರೂ.12,000/-ಗಳು.</td></tr>
<tr><td>5</td><td>ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ</td><td>ಆಯ್ಕೆಯಾದ ಗ್ರಾಮ ಒಂದಕ್ಕೆ ಒಂದು ಕೋಟಿ ರೂಪಾಯಿಗಳು.</td></tr>
</table>
</td></tr>
</table>

| | | |
|---|---|---|
| (ಇ) | ಕಳೆದ ಮೂರು ವರ್ಷಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಇಲಾಖೆಗೆ ಬಂದಿರುವ ಕಂದಾಯ/ಕರವಸೂಲಿಯ ಮೂಲಗಳಾವುವು; ಇದನ್ನು ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಂತೆ ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳು, ನೀರು, ಮೊಬೈಲ್ ಟವರ್‌ಗಳು, ವಿಂಡ್‌ಮಿಲ್‌ಗಳು ಮತ್ತು ಸೋಲಾರ್ ಪಾರ್ಕ್‌ಗಳ ಮೇಲೆ ತೆರಿಗೆ ವಿಧಿಸಬಹುದಾಗಿರುತ್ತದೆ. ಇವುಗಳು ಗ್ರಾಮ ಪಂಚಾಯತಿಗಳ ಕರ ವಸೂಲಾತಿಯ ಮೂಲಗಳಾಗಿರುತ್ತವೆ.<br><br>ಈ ತೆರಿಗೆ ಹಣವನ್ನು ಗ್ರಾಮ ಪಂಚಾಯತಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 58 ರಂತೆ ಪ್ರಕಾರ್ಯಗಳಿಗಾಗಿ ಮತ್ತು ಮೂಲಭೂತ ಸೌಕರ್ಯ ಮಾಡುವುದಕ್ಕಾಗಿ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನಕ್ಕಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. |
| (ಈ) | ಕಲಬುರಗಿ ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಈ ಕೈಗಾರಿಕೆಗಳಿಗೆ ನಿಗಧಿಪಡಿಸಿರುವ ತೆರಿಗೆ ಮತ್ತು ಪ್ರತಿ ಕೈಗಾರಿಕೆಗಳಿಂದ ವಸೂಲಾಗಿರುವ ತೆರಿಗೆ ಮೊತ್ತವೆಷ್ಟು? (ಕಳೆದ ಹತ್ತು ವರ್ಷಗಳ ವಿವರ ನೀಡುವುದು) | ಕಲಬುರಗಿ ಜಿಲ್ಲೆಯ ಗ್ರಾಮ ಪಂಚಾಯತಿ ವ್ಯಾಪ್ತಿಗೆ 12 ಕೈಗಾರಿಕೆ ಘಟಕಗಳು ಬರುತ್ತವೆ. ಈ ಕೈಗಾರಿಕಾ ಘಟಕಗಳಿಂದ ವಸೂಲಾದ ಆಸ್ತಿ ತೆರಿಗೆ ಮೊತ್ತ ರೂ.897175/-ಗಳು. |

ಸಂ. ಗ್ರಾಅಪ 371 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1517 ಕ್ಕೆ
ಅನುಬಂಧ

# TOTAL NO.S OF GPs

| Sl. No. | District Name | No. of GPs |
|---|---|---|
| 1 | BAGALKOTE | 196 |
| 2 | BALLARI | 237 |
| 3 | BELAGAVI | 498 |
| 4 | BENGALURU | 88 |
| 5 | BENGALURU RURAL | 101 |
| 6 | BIDAR | 185 |
| 7 | CHAMARAJANAGARA | 130 |
| 8 | CHIKKABALLAPURA | 157 |
| 9 | CHIKKAMAGALURU | 226 |
| 10 | CHITRADURGA | 189 |
| 11 | DAKSHINA KANNADA | 223 |
| 12 | DAVANAGERE | 195 |
| 13 | DHARWAR | 144 |
| 14 | GADAG | 122 |
| 15 | HASSAN | 267 |
| 16 | HAVERI | 223 |
| 17 | KALABURAGI | 261 |
| 18 | KODAGU | 104 |
| 19 | KOLAR | 154 |
| 20 | KOPPAL | 152 |
| 21 | MANDYA | 233 |
| 22 | MYSURU | 258 |
| 23 | RAICHUR | 178 |
| 24 | RAMANAGARA | 126 |
| 25 | SHIVAMOGGA | 266 |
| 26 | TUMKURU | 330 |
| 27 | UDUPI | 155 |
| 28 | UTTARA KANNADA | 229 |
| 29 | VIJAYYAPURA | 211 |
| 30 | YADGIR | 122 |
| | **TOTAL** | **5960** |